# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1. | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 870 |
| 2. | ಸದಸ್ಯರ ಹೆಸರು | : | ಶ್ರೀ ಕೇಶವಪ್ರಸಾದ್ ಎಸ್ (ವಿಧಾನಸಭಾ ಕ್ಷೇತ್ರ) |
| 3. | ಉತ್ತರಿಸಬೇಕಾದ ದಿನಾಂಕ | : | 15.12.2025 |
| 4. | ಉತ್ತರಿಸಬೇಕಾದ ಸಚಿವರು | : | ವೈದ್ಯಕೀಯ ಶಿಕ್ಷಣ ಸಚಿವರು |

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ರಾಜ್ಯದಲ್ಲಿರುವ ಸ್ವಾಯತ್ತ ಆರೋಗ್ಯ ಸಂಸ್ಥೆಗಳಾದ "ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆ, ಸಂಜಯ್ ಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ" ನೆಫ್ರೋ ಯುರಾಲಜಿ ಸಂಸ್ಥೆಗಳಿಗೆ ಪೂರ್ಣಾವಧಿ ನಿರ್ದೇಶಕರ ನೇಮಕಾತಿ ಆಗಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು) | ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳಾದ ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆ, ಸಂಜಯ್ ಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಗಳಿಗೆ ಪೂರ್ಣಾವಧಿ ನಿರ್ದೇಶಕರ ನೇಮಕಾತಿ ಆಗಿರುವುದಿಲ್ಲ. ಅದರ ಬದಲಾಗಿ ಸಂಸ್ಥೆಯ ದೈನಂದಿನ ಕೆಲಸ ಕಾರ್ಯಗಳು ಸುಗಮವಾಗಿ ನಡೆಯುವ ದೃಷ್ಟಿಯಿಂದ ಸದರಿ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹಿರಿಯ ಪ್ರಾಧ್ಯಾಪಕರಲ್ಲಿ ಒಬ್ಬರಿಗೆ ಸಂಸ್ಥೆಯ ಬೈಲಾ ನಿಯಮಾನುಸಾರ ನಿರ್ದೇಶಕರ ಹುದ್ದೆಯ ಅಧಿಕ ಪ್ರಭಾರವನ್ನು ವಹಿಸಲಾಗಿರುತ್ತದೆ. ಉಳಿದಂತೆ, ನೆಫ್ರೊ-ಯುರಾಲಜಿ ಸಂಸ್ಥೆಗೆ ಪೂರ್ಣಾವಧಿ ನಿರ್ದೇಶಕರನ್ನು ನೇಮಿಸಲಾಗಿರುತ್ತದೆ.<br><br>ಡಾ. ಸಂಜಯ್ ಕೆ.ಎಸ್., ಪ್ರಾಧ್ಯಾಪಕರು, ಶಿಶು ವೈದ್ಯಶಾಸ್ತ್ರ ವಿಭಾಗ ಇವರಿಗೆ ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ ನಿರ್ದೇಶಕರ ಹುದ್ದೆಗೆ ಅಧಿಕ ಪ್ರಭಾರವನ್ನು ವಹಿಸಲಾಗಿರುತ್ತದೆ.<br><br>ಡಾ. ಮದನ್ ಮೋಹನ್ ಬಲ್ಲಾಳ್, ಪ್ರಾಧ್ಯಾಪಕರು, ಅಸ್ಥಿ ಚಿಕಿತ್ಸಾ ವಿಭಾಗ ಇವರಿಗೆ ಸಂಜಯ್ ಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಯ ನಿರ್ದೇಶಕರ ಹುದ್ದೆಗೆ ಅಧಿಕ ಪ್ರಭಾರವನ್ನು ವಹಿಸಲಾಗಿರುತ್ತದೆ.<br><br>ಡಾ. ಶಿವಲಿಂಗಯ್ಯ, ನಿವೃತ್ತ ಪ್ರಾಧ್ಯಾಪಕರು, ಯುರಾಲಜಿ ವಿಭಾಗ, ನೆಫ್ರೋಯುರಾಲಜಿ ಸಂಸ್ಥೆ, ಬೆಂಗಳೂರು ಇವರನ್ನು 3 ವರ್ಷಗಳ ಅವಧಿಗೆ ನೆಫ್ರೋ ಯುರಾಲಜಿ ಸಂಸ್ಥೆಯ ಪೂರ್ಣಾವಧಿ ನಿರ್ದೇಶಕರನ್ನಾಗಿ ನೇಮಿಸಲಾಗಿರುತ್ತದೆ. |
| (ಆ) | ಈ ಸಂಸ್ಥೆಗಳ ಹಾಗೂ ಉಳಿದ ಸ್ವಾಯತ್ತ ಆರೋಗ್ಯ ಸಂಸ್ಥೆಗಳ ಅಭಿವೃದ್ಧಿಗೆ ಕೈಗೊಂಡ ಕ್ರಮಗಳೇನು; ಈ ಎಲ್ಲಾ ಸಂಸ್ಥೆಗಳಿಗೆ ವೈದ್ಯಕೀಯ ಅಧೀಕ್ಷಕರ ನಿಯುಕ್ತಿ ಆಗಿದೆಯೇ; ಈ ಸಂಸ್ಥೆಗಳ ಆಡಳಿತವು ರಾಷ್ಟ್ರೀಯ ವೈದ್ಯಕೀಯ ಆಯೋಗದ ನಿಯಮಗಳಿಗೆ ಬದ್ಧವಾಗಿದೆಯೇ; ಈ ಸಂಸ್ಥೆಗಳನ್ನು ಏಮ್ಸ್ ಮಾದರಿ ಮಾಡಲು ಸರಕಾರ ಯಾವ ಕ್ರಮಗಳನ್ನು ಕೈಗೊಂಡಿದೆ; (ಮಾಹಿತಿ ಒದಗಿಸುವುದು) | ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳು ಹಾಗೂ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ಸರ್ಕಾರದಿಂದ ನೀಡಲ್ಪಡುವ ಸಹಾಯಾನುದಾನದಿಂದ ಮತ್ತು ಆ ಸಂಸ್ಥೆಗಳ ಆಂತರಿಕ ಸಂಪನ್ಮೂಲದಿಂದ, ರಾಷ್ಟ್ರೀಯ ವೈದ್ಯಕೀಯ ಪರಿಷತ್ತಿನ ಮಾರ್ಗಸೂಚಿಯನುಸಾರ ಕಾಲಕಾಲಕ್ಕೆ ಅಗತ್ಯವಿರುವ ಮೂಲಭೂತ ಸೌಕರ್ಯ, ವೈದ್ಯಕೀಯ ಉಪಕರಣ, ಪಿರೋಪಕರಣ, ಔಷಧಿ, ರಾಸಾಯನಿಕಗಳು ಹಾಗೂ ಅಗತ್ಯ ಮಾನವ ಸಂಪನ್ಮೂಲಗಳು ಮತ್ತು ಇನ್ನಿತರೆ ಅಗತ್ಯ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ. |

| | | |
|---|---|---|
| | | ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸ್ವಾಯತ್ತ ವೈದ್ಯಕೀಯ ಕಾಲೇಜುಗಳು ಮತ್ತು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಿಗೆ ವೈದ್ಯಕೀಯ ಅಧೀಕ್ಷಕರನ್ನು ನಿಯೋಜಿಸಲಾಗಿದ್ದು, ಅದರಲ್ಲಿ ಕೆಲವು ಸಂಸ್ಥೆಗಳಲ್ಲಿ ವೈದ್ಯಕೀಯ ಅಧೀಕ್ಷಕರನ್ನು ಸಂಸ್ಥೆಯ ಬೈಲಾ ನಿಯಮಾನುಸಾರ ಖಾಯಂ ಆಗಿ ನೇಮಕ ಮಾಡಲಾಗಿದ್ದು, ಇನ್ನೂ ಕೆಲವು ಸಂಸ್ಥೆಗಳಲ್ಲಿ ಅಧಿಕ ಪ್ರಭಾರದ ಮೇಲೆ ನೇಮಿಸಲಾಗಿದ್ದು, ಈ ಬಗ್ಗೆ ಮಾಹಿತಿಯನ್ನು **ಅನುಬಂಧ-1ರಲ್ಲಿ** ಒದಗಿಸಲಾಗಿದೆ.<br><br>ಈ ಸಂಸ್ಥೆಗಳ ಆಡಳಿತವು ರಾಷ್ಟ್ರೀಯ ವೈದ್ಯಕೀಯ ಆಯೋಗದ ನಿಯಮಗಳಿಗೆ ಬದ್ಧವಾಗಿರುತ್ತದೆ. ಸದರಿ ಸಂಸ್ಥೆಗಳನ್ನು ಏಮ್ಸ್ ಮಾದರಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |
| (ಇ) | ಸದರಿ ಸಂಸ್ಥೆಗಳಿಗೆ ತಿಂಗಳಿಗೆ ಮಾಡುವ ಖರ್ಚು ಎಷ್ಟು? ನಿರ್ದೇಶಕರಿಗೆ ಸಂಬಳ, ಇತರೇ ಭತ್ಯೆ ಸವಲತ್ತುಗಳೇನು? (ಸಂಪೂರ್ಣ ಮಾಹಿತಿ ನೀಡುವುದು) | ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸ್ವಾಯತ್ತ ವೈದ್ಯಕೀಯ ಕಾಲೇಜುಗಳು ಮತ್ತು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಿಗೆ ಸಿಬ್ಬಂದಿಗಳ ವೇತನಕ್ಕಾಗಿ, ಸಂಸ್ಥೆಗಳ ಇತರೆ ಸಾಮಾನ್ಯ ಖರ್ಚುಗಳಿಗಾಗಿ, ನಿವೃತ್ತ ಸಿಬ್ಬಂದಿಗಳಿಗೆ ವಿಶ್ರಾಂತಿ ವೇತನಕ್ಕಾಗಿ, ಹೀಗೆ ಇನ್ನಿತರೆ ವೆಚ್ಚಗಳಿಗಾಗಿ ಆಯವ್ಯಯದಲ್ಲಿ ಅನುದಾನವನ್ನು ಒದಗಿಸಲಾಗುತ್ತಿದ್ದು, ಸದರಿ ಸಂಸ್ಥೆಗಳಿಗೆ ತಿಂಗಳಿಗೆ ಮಾಡುವ ಎಲ್ಲಾ ಖರ್ಚುಗಳನ್ನು ಕ್ರೋಢೀಕರಿಸಿ ಅಂದಾಜು ಮೊತ್ತದ ವಿವರವನ್ನು **ಅನುಬಂಧ-2ರಲ್ಲಿ** ಒದಗಿಸಲಾಗಿದೆ.<br><br>ಸದರಿ ಸಂಸ್ಥೆಗಳ ನಿರ್ದೇಶಕರಿಗೆ AICTE ವೇತನ ಶ್ರೇಣಿಯನ್ನು ನಿಗದಿಪಡಿಸಲಾಗಿದ್ದು, ನಿರ್ದೇಶಕರ ಹುದ್ದೆಯ ಮೂಲ ವೇತನವು ರೂ.1,44,200-2,18,200 ಆಗಿರುತ್ತದೆ. ಸದರಿ ನಿರ್ದೇಶಕರುಗಳ ಒಟ್ಟು ಸಂಬಳವು ಅವರುಗಳು ಸಲ್ಲಿಸಿರುವ ಒಟ್ಟಾರೆ ಸೇವೆಯ ಆಧಾರದ ಮೇಲೆ ಅವಲಂಬಿತವಾಗಿರುತ್ತದೆ. ಸದರಿ ನಿರ್ದೇಶಕರುಗಳಿಗೆ ವೇತನದ ಜೊತೆಗೆ ರೂ.3,000ಗಳ ನಿರ್ದೇಶಕರ ಭತ್ಯೆಯನ್ನು ನೀಡಲಾಗುವುದು. |

**ಸಂಖ್ಯೆ:** ಎಂಇಡಿ 177 ಕೆಯುಎಂ 2025

**(ಡಾ. ಶರಣಪ್ರಕಾಶ ಆರ್. ಪಾಟೀಲ)**
ವೈದ್ಯಕೀಯ ಶಿಕ್ಷಣ ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು.

| ಅನುಬಂಧ-1 | | | |
|---|---|---|---|
| ಶ್ರೀ ಕೇಶವ ಪ್ರಸಾದ್ ಎಸ್ ಇವರ ಪ್ರಶ್ನೆ ಸಂಖ್ಯೆ: 87(870) ಸಂಬಂಧಿಸಿದಂತೆ | | | |
| ಕ್ರ.ಸ | ಸಂಸ್ಥೆಯ ಹೆಸರು | ಸಂಸ್ಥೆಗಳಿಗೆ ವೈದ್ಯಕೀಯ ಅಧೀಕ್ಷಕರ ನಿಯುಕ್ತಿ ಆಗಿದೆಯೇ | ಖಾಯಂ/ಪ್ರಭಾರ |
| 1 | ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು | ನಿಯೋಜಿಸಲಾಗಿದೆ. | ಪ್ರಭಾರ |
| 2 | ಮೈಸೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಮೈಸೂರು | ನಿಯೋಜಿಸಲಾಗಿದೆ. | ಪ್ರಭಾರ |
| 3 | ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ | ನಿಯೋಜಿಸಲಾಗಿದೆ. | ಪ್ರಭಾರ |
| 4 | ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರ, ಬಳ್ಳಾರಿ | ನಿಯೋಜಿಸಲಾಗಿದೆ. | ಪ್ರಭಾರ |
| 5 | ಬೀದರ್, ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ್ | ನಿಯೋಜಿಸಲಾಗಿದೆ. | ಪ್ರಭಾರ |
| 6 | ರಾಯಚೂರು,ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,ರಾಯಚೂರು | ನಿಯುಕ್ತಿಯಾಗಿರುವುದಿಲ್ಲ | |
| 7 | ಬೆಳಗಾವಿ,ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೆಳಗಾವಿ. | ನಿಯೋಜಿಸಲಾಗಿದೆ. | ಖಾಯಂ |
| 8 | ಶಿವಮೊಗ್ಗ,ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಶಿವಮೊಗ್ಗ. | ನಿಯೋಜಿಸಲಾಗಿದೆ. | ಪ್ರಭಾರ |
| 9 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ನಿಯೋಜಿಸಲಾಗಿದೆ. | ಪ್ರಭಾರ |
| 10 | ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ | ನಿಯೋಜಿಸಲಾಗಿದೆ. | ಪ್ರಭಾರ |
| 11 | ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,ಚಾಮರಾಜನಗರ | ಹುದ್ದೆ ಸೃಜನೆಯಾಗಿರುವುದಿಲ್ಲ | |
| 12 | ಕೊಡಗು,ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕೊಡಗು | ನಿಯೋಜಿಸಲಾಗಿದೆ. | ಪ್ರಭಾರ |
| 13 | ಗುಲ್ಬರ್ಗಾ,ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗುಲ್ಬರ್ಗಾ. | ನಿಯೋಜಿಸಲಾಗಿದೆ. | ಪ್ರಭಾರ |
| 14 | ಕೊಪ್ಪಳ,ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕೊಪ್ಪಳ - | ನಿಯೋಜಿಸಲಾಗಿದೆ. | ಪ್ರಭಾರ |
| 15 | ಕೆ.ಎಚ್.ಪಾಟೀಲ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ | ನಿಯೋಜಿಸಲಾಗಿದೆ. | ಪ್ರಭಾರ |
| 16 | ಕಾರವಾರ,ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,ಕಾರವಾರ | ನಿಯೋಜಿಸಲಾಗಿದೆ. | ಪ್ರಭಾರ |
| 17 | ಅಟಲ್ ಬಿಹಾರಿ ವಾಜಪೇಯಿ, ಬೆಂಗಳೂರು. | ನಿಯೋಜಿಸಲಾಗಿದೆ. | ಖಾಯಂ |
| 18 | ನಂದಿ,ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಚಿಕ್ಕಬಳ್ಳಾಪುರ | ನಿಯೋಜಿಸಲಾಗಿದೆ. | ಖಾಯಂ |
| 19 | ಹಾವೇರಿ,ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾವೇರಿ. | ನಿಯೋಜಿಸಲಾಗಿದೆ. | ಖಾಯಂ |
| 20 | ಯಾದಗಿರಿ,ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಯಾದಗಿರಿ. | ನಿಯೋಜಿಸಲಾಗಿದೆ. | ಪ್ರಭಾರ |
| 21 | ಚಿಕ್ಕಮಗಳೂರು,ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಚಿಕ್ಕಮಗಳೂರು. | ಹುದ್ದೆ ಸೃಜನೆಯಾಗಿರುವುದಿಲ್ಲ | |

| ಕ್ರ.ಸ | ಸಂಸ್ಥೆಯ ಹೆಸರು | ಸಂಸ್ಥೆಗಳಿಗೆ ವೈದ್ಯಕೀಯ ಅಧೀಕ್ಷಕರ ನಿಯುಕ್ತಿ ಆಗಿದೆಯೇ | ಖಾಯಂ/ಪ್ರಭಾರ |
|---|---|---|---|
| 22 | ಚಿತ್ರದುರ್ಗ,ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಚಿತ್ರದುರ್ಗ | ಹುದ್ದೆ ಸೃಜನೆಯಾಗಿರುವುದಿಲ್ಲ | |
| 23 | ಸರ್ಕಾರಿ ದಂತ ಕಾಲೇಜು, ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು. | ಹುದ್ದೆ ಸೃಜನೆಯಾಗಿರುವುದಿಲ್ಲ | |
| 24 | ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು | ನಿಯೋಜಿಸಲಾಗಿದೆ. | ಖಾಯಂ |
| 25 | ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಬೆಂಗಳೂರು. | ನಿಯೋಜಿಸಲಾಗಿದೆ. | ಪ್ರಭಾರ |
| 26 | ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ, ಬೆಂಗಳೂರು. | ನಿಯೋಜಿಸಲಾಗಿದೆ. | ಪ್ರಭಾರ |
| 27 | ನೆಫ್ರೋ-ಯುರಾಲಜಿ ಸಂಸ್ಥೆ, ಬೆಂಗಳೂರು. | ನಿಯೋಜಿಸಲಾಗಿದೆ. | ಪ್ರಭಾರ |
| 28 | ಎಸ್‌ಡಿಎಸ್ ಟಿಆರ್‌ಸಿ ಮತ್ತು ರಾಜೀವ್ ಗಾಂಧಿ ಎದೆ ರೋಗಗಳ ಸಂಸ್ಥೆ, ಬೆಂಗಳೂರು | ನಿಯೋಜಿಸಲಾಗಿದೆ. | ಪ್ರಭಾರ |
| 29 | ಕರ್ನಾಟಕ ಎಂಡೋಕ್ರೈನಾಲಜಿ ಮತ್ತು ರೀಸರ್ಚ್,ಬೆಂಗಳೂರು | ಹುದ್ದೆ ಸೃಜನೆಯಾಗಿರುವುದಿಲ್ಲ | |
| 30 | ಧಾರವಾಡ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ, ಧಾರವಾಡ | ನಿಯೋಜಿಸಲಾಗಿದೆ. | ಪ್ರಭಾರ |
| 31 | ರಾಜೀವಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ (ಓಪೆಕ್) ರಾಯಚೂರು | ಹುದ್ದೆ ಸೃಜನೆಯಾಗಿರುವುದಿಲ್ಲ | |
| 32 | ಸಂಜಯ್ ಗಾಂಧಿ ಆಸ್ಪತ್ರೆ, ಬೆಂಗಳೂರು | ನಿಯೋಜಿಸಲಾಗಿದೆ. | ಪ್ರಭಾರ |
| 33 | ಗ್ಯಾಸ್ಟ್ರೋಎಂಟ್ರಾಲಜಿ, ಸೈನ್ಸಸ್ ಅಂಡ್ ಆರ್ಗಾನ್ ಟ್ರಾನ್ಸ್‌ಪ್ಲಾಂಟ್, ಬೆಂಗಳೂರು. | ನಿಯೋಜಿಸಲಾಗಿದೆ. | ಪ್ರಭಾರ |

ನಿರ್ದೇಶಕರು,
ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ,
ಬೆಂಗಳೂರು.

ಅನುಬಂಧ-2

# DIRECTORATE OF MEDICAL EDUCATION

## ಸ್ವಾಯತ್ತ ಆರೋಗ್ಯ ಸಂಸ್ಥೆಗಳಿಗೆ 2024-25ನೇ ಸಾಲಿನಲ್ಲಿ ತಿಂಗಳಿಗೆ ಭರಿಸಲಾದ ಖರ್ಚು
## (ವೇತನ, ವಿಶ್ರಾಂತಿ ವೇತನ, ಸಾಮಾನ್ಯ ವೆಚ್ಚ ಮತ್ತು ಇತರೆ ವೆಚ್ಚಗಳು)

(Rs.In Lakhs)

| SL NO | NAME OF THE INSTITUTE | PER MONTH |
|---|---|---|
| 1 | Sanjay Gandhi Institute of Trauma & Orthopaedics | 420.84 |
| 2 | Rajiv Gandhi Super Speciality Hospital, Raichur | 104.63 |
| 3 | S.D.S Tuberculosis & Rajiv Gandhi Institute of Chest Diseases | 186.56 |
| 4 | VIJAYANAGAR INSTITUTE OF MEDICAL SCIENCES (VIMS) BELLARY | 1645.74 |
| 5 | KARNATAKA INSTITUTE OF MEDICAL SCIENCES (KIMS) HUBLI | 1947.51 |
| 6 | KIDWAI MEMORIAL INSTITUTE OF ONCOLOGY, BANGALORE. | 1693.63 |
| 7 | JAYADEVA INSTITUTE OF CARDIOLOGY | 1766.74 |
| 8 | INDIRA GANDHI INSTITUTE OF CHILD HEALTH | 620.30 |
| 9 | Nephro Urology Institute | 317.21 |
| 10 | KARNATAKA INSTITUTE OF DIABETOLOGY | 44.04 |
| 11 | BANGALORE MEDICAL COLLEGE & RESEARCH INSTITUTE | 3376.69 |
| 12 | MYSORE MEDICAL COLLEGE & RESEARCH INSTITUTE | 1647.35 |
| 13 | GOVERNMENT DENTAL COLLEGE & RESEARCH INSTITUTE, BANGALORE | 280.07 |
| 14 | KARNATAKA INSTITUTE OF MENTAL HEALTH & NEURO SCIENCE - DHARWAD | 184.41 |
| 15 | HASSAN MEDICAL COLLEGE | 1141.97 |
| 16 | SHIMOGA MEDICAL COLLEGE | 1017.90 |
| 17 | MANDYA MEDICAL COLLEGE | 965.27 |
| 18 | BIDAR MEDICAL COLLEGE | 919.91 |
| 19 | BELGAUM MEDICAL COLLEGE | 1057.28 |
| 20 | Raichur Medical College | 846.68 |
| 21 | Upgradation of Peripheral Cancer Center at Kalaburagi | 65.93 |
| 22 | Institute of Gastroenterology Sciences | 139.67 |
| 23 | ATAL BIHARI VAJPAYEE MEDICAL COLLEGE | 794.16 |
| 24 | Medical College at Gadag(Medical Colleges-2013-14) | 766.44 |
| 25 | Medical Colleges at Koppala (Medical Colleges-2013-14) | 565.97 |
| 26 | Medical Colleges at Karwar(Medical Colleges-2013-14) | 594.61 |
| 27 | Medical Colleges at Chamarajanagar (Medical Colleges-2013-14) | 595.63 |
| 28 | Medical Colleges at Madikeri | 648.06 |
| 29 | Medical Colleges at Kalaburagi | 1089.95 |
| 30 | Medical College at Haveri | 379.91 |
| 31 | Medical Colleges at Yadgiri | 220.34 |
| 32 | Medical Colleges at Chikkamagalur | 297.69 |
| 33 | Medical Colleges at Chikkaballapura | 357.88 |
| 34 | Chitradurga Medical College | 158.40 |
| | **TOTAL** | **26859.34** |

Chief ... cer
Cum ... Advisor
Directorate of Medical Education,
Ban...